**CW : 18**

PW : 10

## **1**ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1100/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರಿ ಧನಂಜಯ ಬಿ.ಸಿ. |
| ತಂದೆಯ ಹೆಸರು | : | ಚನ್ನೆ ಗೌಡ |
| ಪ್ರಾಯ | : | 34 ವರ್ಷ |
| ಉದ್ಯೋಗ | | ಪಿ.ಎಸ್ಐ , ಸಂಚಾರ ಪೊಲೀಸು ಠಾಣೆ , ಚಿಕ್ಕ ಮಗಳೂರು |
| ವಾಸಸ್ಥಳ | : | ಚಿಕ್ಕಮಗಳೂರು |

ದಿನಾಂಕ:**09-06-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ಜೂನ್ 2023 ರಿಂದ ಅಕ್ಟೋಬರ್ 2023 ರ ವರೆಗೆ ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 24-09-2023 ರಂದು ಚಾ.ಸಾ.16 ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾ.ಸಾ.9 ಮತ್ತು 10 ರವರ ಸಮಕ್ಷಮ ಸ್ಥಳ ಮಹಜರನ್ನು ನಡೆಸಿರುತ್ತೇನೆ ಹಾಗೂ ಸ್ಥಳದಲ್ಲಿ ನಕ್ಷೆಯನ್ನು ಕೂಡಾ ತಯಾರಿಸಿರುತ್ತೇನೆ. ಸ್ಥಳ ಮಹಜರನ್ನು ಬೆ.10.00 ರಿಂದ 11.00 ಗಂಟೆಯವರೆಗೆ ಜರುಗಿಸಲಾಗಿದೆ. ಮಹಜರು ಕಾಲದಲ್ಲಿ ಪಂಚರ ಸಮಕ್ಷಮ ಕೆಎ-19ಎಮ್ಜಿ-5294 ನೊಂದಣಿ ಸಂ. ಇಕೋ ಕಾರನ್ನು ನನ್ನ ವಶಕ್ಕೆ ಪಡೆದಿದ್ದೇನೆ. ಸ್ವಾಧೀನಪಡಿಸಿಕೊಂಡ ವಾಹನವನ್ನು ಪಿ.ಎಫ್‌ಗೆ ಲಗತ್ತಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿ.24-09-23 ರಂದು ಚಾಸಾ-1 ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-7 ಮತ್ತು 8 ರವರ ಹೇಳಿಕೆಗಳನ್ನೂ ಕೂಡಾ ಪಡೆದಿದ್ದೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ19 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಯು ಮಹಜರನ್ನು, ನಕ್ಷೆಯನ್ನು ಹಾಗೂ ಅದರಲ್ಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಮಹಜರನ್ನು ಈಗಾಗಲೇ ನಿಪಿ-3 ಎಂದು ಹಾಗೂ ನಕ್ಷೆಯನ್ನು ಈಗಾಗಲೇ ನಿಪಿ-4 ಎಂದು

ಗುರುತಿಸಲಾಗಿದ್ದು ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-3ಡಿ ಹಾಗೂ 4ಡಿ ಎಂದು ಗುರುತಿಸಲಾಯಿತು.

ಮಹಜರು ಕಾಲದಲ್ಲಿ ಸ್ವಾಧೀನಪಡಿಸಿಕೊಂಡಿದ್ದ ಕಾರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಪಿ-1 ರಲ್ಲಿ ಕಾಣುವ ಕಾರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಮಹಜರಿನಲ್ಲಿನ ಚೆಕ್ಕುಬಂದಿಯಲ್ಲಿ ಅಥವಾ ನಕ್ಷೆಯಲ್ಲಾಗಲೀ ಶಾಲೆಯ ಬಳಿ ಅಪಘಾತ ನಡೆದಿದೇ ಎನ್ನುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಶಾಲೆಯಿಂದ ಎಷ್ಟು ದೂರದಲ್ಲಿ ಅಪಘಾತ ಆಗಿದೆ ಎಂದು ಮಹಜರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ಪಂಚರಿಗೆ ಮಹಜರು ಕಾಲದಲ್ಲಿ ಹಾಜರಿರುವಂತೆ ನೋಟೀಸ್ ಕೊಟ್ಟಿದ್ದೆವು. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಭರತ್ ರವರ ಅಂಗಡಿ ಅಪಘಾತ ಸ್ಥಳದಿಂದ ಸುಮಾರು 100 ಅಡಿ ದೂರದಲ್ಲಿದೆ. ಅದನ್ನು ಮಹಜರಿನಲ್ಲಿ ಕಣ್ತಪ್ಪಿನಿಂದ ನಮೂದು ಮಾಡಿಲ್ಲ. ಅಪಘಾತ ಆದ ಸ್ಥಳದಲ್ಲಿ ಗಾಡಿಯ ಬಿಡಿ ಭಾಗ ಮತ್ತು ರಕ್ತದ ಕಲೆಗಳು ಇದ್ದ ಬಗ್ಗೆ ಮಹಜರಿನಲ್ಲಾಗಲೀ ಅಥವಾ ನಕ್ಷೆಯಲ್ಲಾಗಲೀ ತೋರಿಸಿಲ್ಲ.

ಸ್ಥಳೀಯರನ್ನು ಮಹಜರಿನ ಪಂಚರನ್ನಾಗಿ ಮಾಡಿರುತ್ತೇವೆ. ಸ್ಥಳದಲ್ಲಿ ನಾವು ಫೊಟೋವನ್ನು ತೆಗೆಸಿದ್ದೇವೆ. ಸ್ಥಳ ಮಹಜರಿಗೆ ಬಂದ ಪಂಚರ ಹೇಳಿಕೆ ಪಡೆದಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತ ಸ್ಥಳಕ್ಕೆ ಹೋಗೇ ಇಲ್ಲ ಹಾಗೂ ಸದಳದಲಿಃ ಪಂಚರ ಸಮಕ್ಷಮ ಮಹಜರನ್ನಾಗಲೀ ಅಥವಾ ನಕ್ಷೆಯನ್ನಾಗಲೀ ತಯಾರಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ಮಹಜರಾದ ಕಾರಣ ಸ್ಥಳೀಯರನ್ನು ಪಂಚರನ್ನಾಗಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ, ನಾನು ತಯಾರಿಸಿದ ಸುಳ್ಳು ಮಹಜರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 18**

PW : 10